**ಅ. ದಾ. ಸಂ. ः279/2022**

**ಪಿ.ಡಬ್ಲ್ಯೂ : 01 ನರಸಮ್ಮ**

**ದಿನಾಂಕ : 14.08.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ವಾದಿಯ ಪರ ಶ್ರೀ.ಎಂ ಡಿ ಎಸ್ . ವಕೀಲರಿಂದ :-**

ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಪ್ರಮಾಣಪತ್ರದಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರವನ್ನು ವಕೀಲರಿಗೆ ನಾನು ಹೇಳಿ ಬರೆಯಿರುತ್ತೇನೆ. ದಾವೆಗೆ ಸಂಬಂಧಪಟ್ಟಂತೆ ಕೆಲವು ದಾಖಲೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನನ್ನ ಪರವಾಗಿ ಗುರುತಿಸಲು ಕೇಳಿಕೊಳ್ಳುತ್ತೇನೆ.

ದಿನಾಂಕ 20.10.1970 ರ ಧೃಡೀಕೃತ ನಕಲಿನ ಕ್ರಯಪತ್ರವನ್ನು ಹಾಜರು ಪಡಿಸಿದ್ದು ನಿಪಿ-1 ಎಂದು ಗುರುತಿಸಲಾಯಿತು. ದಿನಾಂಕ 18.12.1974 ರ ಧೃಡೀಕೃತ ನಕಲಿನ ಕ್ರಯಪತ್ರವನ್ನು ಹಾಜರು ಪಡಿಸಿದ್ದು ನಿಪಿ-2 ಎಂದು ಗುರುತಿಸಲಾಯಿತು. ದಿನಾಂಕ 29.11.1994 ರ ನೋಂದಾಯಿತ ಕ್ರಯಪತ್ರವನ್ನು ಹಾಜರು ಪಡಿಸಿದ್ದು ನಿಪಿ-03 ಎಂದು ಗುರುತಿಸಲಾಯಿತು. ಧೃಡೀಕೃತ ನಕಲಿನ ಮ್ಯುಟೇಷನ್ ಹಾಜರು ಪಡಿಸಿದ್ದು ನಿಪಿ-04 ಎಂದು ಗುರುತಿಸಲಾಯಿತು. ತೆರಿಗೆ ಪಾವತಿ ರಸೀದಿಗಳನ್ನು ಹಾಜರು ಪಡಿಸಿದ್ದು ನಿಪಿ-05 ಮತ್ತು ನಿಪಿ-06 ಎಂದು ಗುರುತಿಸಲಾಯಿತು. ಸರ್ವೆ ನಂ.40/5 ರ ಪಹಣಿ ಪತ್ರಿಕೆಗಳನ್ನು ಹಾಜರು ಪಡಿಸಿದ್ದು ನಿಪಿ-07, ನಿಪಿ-8 ಮತ್ತು ನಿಪಿ-09 ಎಂದು ಗುರುತಿಸಲಾಯಿತು. ದಿನಾಂಕ 24.03.2022 ರಂದು ಭೂದಾಖಲೆಗಳ ಸಹಾಯಕ ನಿರ್ದೇಶಕರು ಬೆಂಗಳೂರು ದಕ್ಷಿಣ ತಾಲ್ಲೂಕು ರವರು ನೀಡಿದ ಹಿಂಬರಹವನ್ನು ಹಾಜರು ಪಡಿಸಿದ್ದು ನಿಪಿ-10 ಎಂದು ಗುರುತಿಸಲಾಯಿತು. ದಿನಾಕಂ 07.10.1994 ರ ಧೃಡೀಕೃತ ನಕಲಿನ ಕ್ರಯಪತ್ರವನ್ನು ಹಾಜರು ಪಡಿಸಿದ್ದು ನಿಪಿ-11 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ, ಸಮಯ ನೀಡಿ ಮುಂದುವರೆದ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ಸಿ. ಜ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**